ಓ ಎಸ್ ನಂ. 34/2017 ಪಿ.ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಪುಟ್ಟಲಕ್ಷ್ಮಮ್ಮ

ದಿನಾಂಕ 23-02-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u> 1 ರಿಂದ 5 ನೇ ಪ್ರತಿವಾದಿ ಪರ ಶ್ರೀ ಕೆ ಆರ್ ಸಿ ವಕೀಲರಿಂದ,

1. ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ಸಾಮಾನ್ಯವಾಗಿ ಯಾವುದೇ ದಾಖಲೆಗಳಿಗೆ ಸಹಿ ಮಾಡಬೇಕಾದರೆ ಅದನ್ನು ಓದಿಸಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ದಾವಾ ಪತ್ರದಲ್ಲಿ ಹೇಳಿರುವ ಅಜ್ಜನಾಯಕ ನನ್ನ ತಂದೆಯ ತಂದೆ ಎಂದರೆ ಸರಿ ಸದರಿ ಅಜ್ಜನಾಯಕರವರಿಗೆ ಕಾಳನಾಯಕ, ಸಣ್ಣಪ್ಪನಾಯಕ ಎಂಬ ಇಬ್ಬರು ಗಂಡು ಮಕ್ಕಳು. ಅಜ್ಜನಾಯಕರವರಿಗೆ 3 ಜನ ಹೆಣ್ಣು ಮಕ್ಕಳು ಇದ್ದರು.

2. ಸಾಕ್ಷಿ ಮುಂದುವರೆದು ಇಬ್ಬರು ಹೆಣ್ಣು ಮಕ್ಕಳು ಎನ್ನುತ್ತಾರೆ. ಅವರ ಹೆಸರು ಗೌರಮ್ಮ ಮತ್ತು ಕೆಂಪಮ್ಮ ಎಂದರೆ ಸರಿ. ಗೌರಮ್ಮ ತೀರಿಕೊಂಡಿರುತ್ತಾರೆ. ಗೌರಮ್ಮನಿಗೆ ಪುಟ್ಟನಾಯಕ ಮತ್ತು ಮಹದೇವನಾಯಕ ಎಂಬ ಮಕ್ಕಳು ಇದ್ದರು. 1 ನೇ ಪ್ರತಿವಾದಿ ನಿರ್ಮಲರವರ ಯಜಮಾನರೇ ಪುಟ್ಟನಾಯಕ ಎಂದರೆ ಸರಿ. ಉಳಿದ ಪ್ರತಿವಾದಿಯವರು ಅಂದರೆ 2 ರಿಂದ 5 ಪ್ರತಿವಾದಿಯವರು ಈ ಪುಟ್ಟನಾಯಕರ ಮಕ್ಕಳು ಎಂದರೆ ಸರಿ.

3. ಈ ಪುಟ್ಟನಾಯಕರು ಬದುಕಿದ್ದಾರೆ. ಗೌರಮ್ಮನವರ 2 ನೇ ಮಗ ಮಹದೇವನಾಯಕರು ತೀರಿಕೊಂಡಿರುತ್ತಾರೆ. ಈ ಮಹದೇವನಾಯಕರ ಹೆಂಡತಿ ಮಕ್ಕಳು ಇದ್ದಾರೆ. ಅವರೆಲ್ಲರೂ ಹೊಳೆನರಸೀಪುರ ತಾಲ್ಲೂಕಿನ ಆಲಗೌಡನಹಳ್ಳಿಯಲ್ಲಿ ವಾಸವಾಗಿದ್ದಾರೆ. ಮಹದೇವನಾಯಕರಿಗೆ ಒಬ್ಬ ಹೆಂಡತಿ ಮತ್ತು 2 ಜನ ಮಕ್ಕಳು ಇದ್ದಾರೆ. ಮಹದೇವನಾಯಕರ ಹೆಂಡತಿ ಹೆಸರು ಗೌರಮ್ಮ, ಮಕ್ಕಳ ಹೆಸರು ಗೊತ್ತಿಲ್ಲ.

4. ಅಜ್ಜನಾಯಕನ ಮಗಳಾದ ಗೌರಮ್ಮನಿಗೆ ಶಿವಮ್ಮ, ಸರೋಜಮ್ಮ ರತ್ನಮ್ಮ ಮತ್ತು ರುಕ್ಮಿಣಿ ಎಂಬ ಹೆಣ್ಣು ಮಕ್ಕಳು ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಜ್ಜನಾಯಕನ 2 ನೇ ಮಗಳಾದ ಕೆಂಪಮ್ಮನಿಗೆ ಒಬ್ಬನೇ ಮಗ ಶಿವಣ್ಣನಾಯಕ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಪತ್ರದಲ್ಲಿ ಅಜ್ಜನಾಯಕರ ಹೆಣ್ಣು ಮಕ್ಕಳಾದ ಗೌರಮ್ಮ ಮತ್ತು ಕೆಂಪಮ್ಮರವರ ಮಕ್ಕಳನ್ನು ಸೇರಿಸಿಲ್ಲ ಎಂದರೆ ಸರಿ.

5. ನನ್ನ ತಂದೆ ಕಾಳನಾಯಕರವರಿಗೆ 4 ಜನ ಹೆಣ್ಣು ಮತ್ತು ಒಬ್ಬ ಗಂಡು ಮಗನಿದ್ದನು. ಸದರಿ ಕಾಳನಾಯಕರವರು ಒಬ್ಬ ಹೆಣ್ಣು ಮಗಳಾದ ರುಕ್ಮಿಣಿ ಎಂಬುವವರು ಎಂದರೆ ನನ್ನ ಸಹೋದರಿ ತೀರಿಕೊಂಡಿರುತ್ತಾರೆ. ಅವರಿಗೆ ಮದುವೆಯಾಗಿತ್ತು. ಅವರಿಗೆ ಕೆ ಆರ್ ನಗರ

ತಾಲ್ಲೂಕಿನ ಹೆಬ್ಬಾಳಕ್ಕೆ ಮದುವೆ ಮಾಡಿ ಕೊಡಲಾಗಿತ್ತು. ಸದರಿ ರುಕ್ಮಿಣಿಯ ಯಜಮಾನರು ಜೀವಿತವಿದ್ದಾರೆ. ಅವರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. ಸದರಿ ರುಕ್ಮಿಣಿಯ ಯಜಮಾನರು ಹಾಗೂ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಸದರಿ ರುಕ್ಮಿಣಿಯ ಯಜಮಾನರನ್ನು ಹಾಗೂ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

6. ದಾವಾ ಷೆಡ್ಯೂಲ್ ಸ್ವತ್ತುಗಳನ್ನು 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಇರುವುದರಿಂದ ಅವರು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ನನ್ನ ಕಾಳನಾಯಕರವರು ತೀರಿಕೊಂಡ ನಂತರ ಅವರ ಹೆಸರಿನಲ್ಲಿರುವ ಸ್ವತ್ತುಗಳಿಗೆ ನಾನು ಕೂಡ ವಾರಸುದಾರಳೆಂದು ಖಾತಾ ಬದಲಾವಣೆಗೆ ಅರ್ಜಿಯನ್ನು ನೀಡಿರುವುದಿಲ್ಲ.

7. 1 ನೇ ಪ್ರತಿವಾದಿ ದಾವಾ ಸ್ವತ್ತುಗಳನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದಂತಹ ಸ್ವತ್ತುಗಳ ಸ್ವಾಧೀನವನ್ನು 6 ನೇ ಪ್ರತಿವಾದಿ ಹೊಂದಿರುತ್ತಾರೆ ಸಾಕ್ಷಿ ಅವರು ಕಟ್ಟಡವನ್ನು ಬೀಳಿಸುವಾಗ ನಾವು ಹೋಗಿ ಕೇಳಿರುತ್ತೇವೆ ನಂತರ ಈ ದಾವೆಯನ್ನು ಸಲ್ಲಿಸಿರುತ್ತೇವೆ. ದಾವಾ ಹಾಕುವಾಗ ದಾವಾ ಆಸ್ತಿಯನ್ನು ನೋಡಿರುತ್ತೇನೆ, ಆಗ ದಾವಾ ಸ್ವತ್ತಿನಲ್ಲಿರುವ ಕಟ್ಟಡವನ್ನು ಬೀಳಿಸಲಾಗಿತ್ತು. ದಾವಾ ಸ್ವತ್ತಿನಲ್ಲಿರುವ ಕಟ್ಟಡವನ್ನು ಬ ೀಳಿಸಿದ ನಂತರ ಹೊಸ ಕಟ್ಟಡವನ್ನು ಕಟ್ಟಿಸಿಕೊಂಡ 6 ನೇ ಪ್ರತಿವಾದಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ.

8. ದಾವಾ ಸ್ವತ್ತಿನಲ್ಲಿ 6 ನೇ ಪ್ರತಿವಾದಿಯರೆ ವಾಸವಾಗಿದ್ದ ವಿಷಯ ನನಗೆ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಅವರು ಕಟ್ಟಡವನ್ನು ಬೀಳಿಸುವಾಗ ನಾವು ತಕರಾರು ಮಾಡಿದೇವು, ನಂತರ ನಾವು ನೋಡಿಲ್ಲ ಎನ್ನುತ್ತಾರೆ. ಅಜ್ಜನಾಯಕರು ಹಾಗೂ ಅವರ ಮಕ್ಕಳು ಅವರ ಜೀವಿತವಿರುವಾಗ ಅವರ ಒಟ್ಟು ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ಅಜ್ಜನಾಯಕರು ಇಬ್ಬರು ಮಕ್ಕಳಿಗೂ ಅವರ ತಂದೆಯ ಆಸ್ತಿಯಲ್ಲಿ ಇಬ್ಬರಿಗೂ ಸಮನಾದ ಹಕ್ಕು ಇದೆ ಎಂದರೆ ಸರಿ.

9. ಅಜ್ಜನಾಯಕರಿಗೆ ದಾವಾ ಸ್ವತ್ತುಗಳನ್ನು ಬಿಟ್ಟು ಬೇರೆ ಜಮೀನುಗಳು ಇದ್ದವು. ಕೆ ಆರ್ ನಗರ ತಾಲ್ಲೂಕು ಹೊಸಅಗ್ರಹಾರದ ಹೊಸೂರು ಗ್ರಾಮದಲ್ಲಿ ಸರ್ವೇ ನಂ.14/1 ರಲ್ಲಿ 1 ಎಕರೆ 13 ಗುಂಟೆ ಹಾಗೂ ಸರ್ವೇ ನಂ.16/1 ರಲ್ಲಿ 2 ಎಕರೆ 8 ಗುಂಟೆ ಜಮೀನು ಇದ್ದವು ಎಂದರೆ ಸಾಕ್ಷಿ ಇರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನಗೆ ಒಬ್ಬಳೇ ಮಗಳು ಇದ್ದಾಳೆ, ಅವಳ ಹೆಸರು ನಾಗವೇಣಿ. ನನ್ನ ಮಗಳನ್ನು 3 ನೇ ಪ್ರತಿವಾದಿಗೆ ಮದುವೆ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ನನ್ನ ಮಗಳು ಮತ್ತು ಅಳಿಯನೊಂದಿಗೆ ಚೆನ್ನಾಗಿ ಇದ್ದೇನೆ.

10. ನನ್ನ ಮಗಳು ಸಿ ನಾಗವೇಣಿ ಹಾಗೂ ನನ್ನ ಅಳಿಯ ಕೆ ಮಲ್ಲೇಶ ಬಿನ್ ಕಾಳನಾಯಕ

ಸೇರಿ ಅಜ್ಜನಾಯಕರ ಸ್ವತ್ತರಾದ ಸರ್ವೆ ನಂ. 14/1 ರಲ್ಲಿನ 1 ಎಕರೆ 13 ಗುಂಟೆ ಪೈಕಿ ಇಪ್ಪತ್ತಾರುವರೆ ಗುಂಟೆ ಜಮೀನನ್ನು ನೊಂದಾಯಿತ ದಾನ ಪತ್ರದ ಮೂಲಕ ಹಾಗೂ ಉಳಿದ ಇಪ್ಪತ್ತಾರುವರೆ ಗುಂಟೆ ಜಮೀನನ್ನು ನೊಂದಾಯಿತ ಕ್ರಯ ಪತ್ರದ ಮೂಲಕ ತಿಮ್ಮನಾಯಕ ಬಿನ್ ದೊಡ್ಡಮನಿನಾಯಕ ರವರಿಗೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

11. ನನ್ನ ಚಿಕ್ಕಪ್ಪ ಸಣ್ಣಪ್ಪನಾಯಕನ ಹೆಂಡತಿ ಯಶೋದಮ್ಮ ಮತ್ತು ಅವರ ಮಗ ಸ್ವಾಮಿನಾಯಕ ಅಂದರೆ 4 ಮತ್ತು 5 ನೇ ವಾದಿಗಳು ನನ್ನೊಂದಿಗೆ ಚೆನ್ನಾಗಿ ಇದ್ದಾರೆ. 5 ನೇ ಪ್ರತಿವಾದಿ ಅಜ್ಜಪ್ಪನಾಯಕನವರ ಸರ್ವೆ ನಂ. 16/1 ರಲ್ಲಿನ 2 ಎಕರೆ 8 ಗುಂಟೆ ಜಮೀನಿನ ಪೈಕಿ 1 ಎಕರೆ 4 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ಒಂದು ಎಕರೆ 4 ಗುಂಟೆ ಜಮೀನನ್ನು ನನ್ನ ಮಗಳು ಹಾಗೂ ಅಳಿಯ ನಿಂಗರಾಜನಾಯಕರವರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಈ ಎಲ್ಲಾ ವ್ಯವಹಾರಗಳ ವಿಚಾರ ನನಗೆ ಗೊತ್ತಿದ್ದರೂ ಸಹ, ಒಪ್ಪಿಕೊಂಡರೇ ತೊಂದರೆಯಾಗುತ್ತದೆ ಎಂದು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಅಜ್ಜನಾಯಕರವರಿಗೆ ಈ ಜಮೀನುಗಳಲ್ಲಿ ಭಾಗ ಬರಬೇಕೆಂದು ನಾನು ಕೇಳಿರುವುದಿಲ್ಲ, ಕಾರಣ ನನಗೆ ಬೇಕಾಗಿರುವುದಿಲ್ಲ. ಈ ದಾವೆಯಲ್ಲಿ ಈ ಜಮೀನುಗಳನ್ನು ಸೇರಿಸಿರುವುದಿಲ್ಲ, ಕಾರಣ ನನಗೆ ಬೇಕಾಗಿರುವುದಿಲ್ಲ. ನಾನು ದುರುದ್ದೇಶದಿಂದ 1 ನೇ ಪ್ರತಿವಾದಿ ಮಾರಾಟ ಮಾಡಿದ ಸ್ವತ್ತುಗಳಿಗೆ ಮಾತ್ರ ದಾವಾ ಸಲ್ಲಿಸಿ ಉಳಿದ ಸ್ವತ್ತುಗಳನ್ನು ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಶಿಕ್ಷಕರಾಗಿದ್ದರು ಹಾಗೂ ಅವರ ಸೇವೆ ವರ್ಗಾವಣೆಯಾಗುತ್ತಿತ್ತು. ನನ್ನ ಚಿಕ್ಕಪ್ಪನಿಗೆ ಏನು ಕೆಲಸ ಇರಲಿಲ್ಲ. ಅವರು ಊರಿನಲ್ಲಿ ವ್ಯವಸಾಯ ಮಾಡುತ್ತಿರಲಿಲ್ಲ, ಬೇರೆಯವರು ವ್ಯವಸಾಯ ಮಾಡುತ್ತಿದ್ದರು.

13. ಪ್ರತಿವಾದ ಪತ್ರದಲ್ಲಿರುವ ಬಿ ಷೆಡ್ಯೂಲ್ ಸ್ವತ್ತು ನನ್ನ ಚಿಕ್ಕಪ್ಪನಿಗೆ ದರಕಾಸ್ತ ಮೂಲಕ ಬಂದಿರುತ್ತದೆ. ನನ್ನ ಚಿಕ್ಕಪ್ಪನಿಗೆ ಬೇರೆ ಸರಕಾರಿ ಸೇವೆ ಅಥವಾ ಉದ್ಯೋಗ ಇರಲಿಲ್ಲ. ಒಟ್ಟು ಕುಟುಂಬದ ಸ್ವತ್ತುಗಳಿಂದ ಬಂದ ಆದಾಯದಿಂದಲೇ ನನ್ನ ಚಿಕ್ಕಪ್ಪ ದರಕಾಸ್ತ ಜಮೀನಿಗೆ ಪ್ರಿಮಿಯಮ್ ಹಣವನ್ನು ಕಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಪತ್ರದಲೀಲಿರುವ ಸ್ವತ್ತುಗಳು ಹಾಗೂ ಪ್ರತಿವಾದ ಪತ್ರದಲಲ್ಲಿರುವ ಸ್ವತುುತ್ತಗಳೆಲ್ಲವು ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸಾಕ್ಷಿ ಚಿಕ್ಕಪ್ಪನ ಸ್ವತ್ತಿನಲ್ಲಿ ನಮಗೆ ಭಾಗ ಇಲ್ಲ, ಆದರೆ ನಮ್ಮ ತಾತನ ಸ್ವತ್ತುಗಳಲ್ಲಿ ನಮಗೆ ಭಾಗ ಇದೆ ಎನ್ನುತ್ತಾರೆ. ನನ್ನ ಚಿಕ್ಕಪ್ಪ ಓಡಾಡಿಕೊಂಡು ಚೆನ್ನಾಗಿ ಇದ್ದಾರೆ ಎಂದರೆ ಸಾಕ್ಷಿ ಓಡಾಡಿಕೊಂಡು ಇದ್ದಾರೆ ಎನ್ನುತ್ತಾರೆ. ನನ್ನ ಚಿಕ್ಕಪ್ಪನಿಗೆ ದರಕಾಸ್ತ ಆದ ವಿಚಾರ ಅವರ ಮಗನಿಗೆ ಚೆನ್ನಾಗಿ ಗೊತ್ತು ಎಂದರೆ ಸರಿ.

ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎಸ್ ಕೆ ಎಂ ವಕೀಲರಿಂದ,

6 ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರು ಗೈರು ಹಾಜರು ಇರುವುದರಿಂದ ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.